Sahitya School

Shidlaghatta Road, Near Shirusti Hospital, H Cross.

# ಮಕ್ಕಳ ಮನೆಕೆಲಸದಲ್ಲಿ ನೀವು ಸಕ್ರಿಯವಾಗಿ ಸಹಕರಿಸಿ. ಇದರಿಂದ ಅವರು ಮನೆಗೆಲಸವನ್ನು ತುಂಬಾ ಆಸಕ್ತಿಯಿಂದ ಮಾಡುತ್ತಾರೆ.



- **ನಿಮ್ಮ ಮಗುವಿನ ಶಿಕ್ಷಕರ ಬಗ್ಗೆ ತಿಳಿದುಕೊಳ್ಳಿ.** ನಿಮ್ಮ ಮಗುವಿನ ಶಿಕ್ಷಕರನ್ನು ಭೇಟಿ ಮಾಡಲು ಪೋಷಕರ ಶಿಕ್ಷಕರ ಸಭೆ ಹಾಗೂ ಇನ್ನಿತರೆ ಶಾಲಾ ಕಾರ್ಯಕ್ರಮಗಳಲ್ಲಿ ತಪ್ಪದೇ ಭಾಗವಹಿಸಿ.

- **ಹೋಮ್ ವರ್ಕ್ ಫ್ರೆಂಡ್ಲಿ ಏರಿಯಾ.** ಹೋಮ್ ವರ್ಕ್‌ಅನ್ನು ಸರಿಯಾದ ಸಮಯಕ್ಕೆ ಮುಗಿಸಲು ಮಕ್ಕಳಿಗೆ ಸರಿಯಾದ ಗಾಳಿ ಬೆಳಕು ಇರುವ ಸ್ಥಳವನ್ನು ವ್ಯವಸ್ಥೆ ಮಾಡಿ. ಕಾಗದ, ಪೆನ್ಸಿಲ್, ಕತ್ತರಿ, ಗೋಂದು ಅವರ ಕೈಗೆ ಸಿಗುವಂತೆ ಇಡಿ.

- **ಅಧ್ಯಯನಕ್ಕೆ ಒಂದು ಸಮಯವನ್ನು ನಿಗದಿಪಡಿಸಿ.** ಮಕ್ಕಳು ದಿನದ ಯಾವುದೋ ಒಂದು ಸಮಯದಲ್ಲಿ ತುಂಬಾ ಕ್ರಿಯಾಶೀಲರಾಗಿರುತ್ತಾರೆ. ಕೆಲವರು ಬೆಳಗಿನ ಜಾವದಲ್ಲಿ, ಕೆಲವರು ಮಧ್ಯಾಹ್ನದಲ್ಲಿ, ಮತ್ತೆ ಕೆಲವರು ರಾತ್ರಿ ಊಟದ ನಂತರ ಹೆಚ್ಚು ಕೆಲಸ ಮಾಡುವ ಕ್ಷಮತೆಯನ್ನು ಹೊಂದಿರುತ್ತಾರೆ. ಪೋಷಕರು ಅದನ್ನು ಗುರ್ತಿಸಿಕೊಂಡು ಆ ಸಮಯಗಳಿಗೆ ಆಧ್ಯತೆ ನೀಡುವುದು ಒಳ್ಳೆಯದು.

- **ಯೋಜನೆ ಮಾಡಲು ಅವರಿಗೆ ಸಹಾಯ ಮಾಡಿ.** ಹೆಚ್ಚು ಓದಬೇಕಾದ, ಅಥವಾ ಹೆಚ್ಚು ಮನೆಗೆಲಸ ಇರುವ ಸಂದರ್ಭಗಳಲ್ಲಿ, ಕೆಲಸ ಮಾಡುವ ಸಮಯವನ್ನು ಚಿಕ್ಕ ಚಿಕ್ಕ ಅವಧಿಗಳಾಗಿ ವಿಭಾಗಿಸಿಕೊಳ್ಳಲು ನಿಮ್ಮ ಮಕ್ಕಳಿಗೆ ಸಹಕರಿಸಿ. ಪ್ರತಿಯೊಂದು ಗಂಟೆಯ ನಡುವೆ ಕನಿಷ್ಟ ಹದಿನೈದು ನಿಮಿಷಗಳ ಬಿಡುವು ಪಡೆಯುವಂತೆ ತಿಳಿಸಿ.

- **ಅಡಚಣೆಗಳನ್ನು ಕನಿಷ್ಠ ಮಟ್ಟಕ್ಕೆ ಇರಿಸಿ.** ಟಿ.ವಿ, ಇತರೆ ಸಂಗೀತ, ಫೋನ್ ಕರೆ ಮುಂತಾದ ಗದ್ದಲಗಳನ್ನು ಆದಷ್ಟೂ ಕಡಿಮೆ ಮಾಡಿ.

- **ಮಾದರಿ ಮತ್ತು ಮಾರ್ಗದರ್ಶಕ ನೀವೇ ಆಗಿರಿ.** ಮನೆಗೆಲಸದ ಯೋಜನೆಗಳನ್ನು ಗಮನಿಸಿ. ಪರೀಕ್ಷೆಗಳ ಬಗ್ಗೆ ಮಾತನಾಡಿ. ರಸಪ್ರಶ್ನೆಗಳ ಬಗ್ಗೆ ಚರ್ಚಿಸಿ. ಮಕ್ಕಳು ಮಾಡಿರುವ ಇತರ ಕ್ರಿಯಾಶೀಲ ಕೆಲಸಗಳನ್ನು ಗಮನಿಸಿ, ಹೊಗಳಿ. ಇಂತಹವುಕ್ಕೆಲ್ಲಾ ನೀವು ಬಿಡುವು ಮಾಡಿಕೊಳ್ಳುವುದು ಯಾವಾಗಲೂ ಒಳ್ಳೆಯದು.

**Where Fun Meets Learning**